# ತುಮಕೂರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ

**ತುಮಕೂರು ವಿಶ್ವವಿದ್ಯಾನಿಲಯ, ಜ್ಞಾನಸಿರಿ ಆವರಣ, ಬಿದರಕಟ್ಟೆ, ತುಮಕೂರು-572118**

# TUMKUR SUB REGIONAL SCIENCE CENTRE

TUMKUR UNIVERSITY, JNANASIRI CAMPUS, BIDARAKATTE, TUMAKURU-572118

**ಸಂ: ತುವಿ/ತುಉಪ್ರಾವಿಕೇ/ನೇ.ಮ/2026-27** **ದಿನಾಂಕ: 08-06-2026**

## ಅಧಿಸೂಚನೆ

**ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಐಟಿಬಿಟಿ/200/ಎಸ್ ಟಿಎಸ್/2024, ದಿನಾಂಕ: 31-01-2026**
**2. ತಿದ್ದುಪಡಿ ಆದೇಶ ಸಂಖ್ಯೆ: ಸರ್ಕಾರಿ ಆದೇಶ ಸಂಖ್ಯೆ: ಐಟಿಬಿಟಿ/200/ಎಸ್ ಟಿಎಸ್/2024, ದಿನಾಂಕ: 05-02-2026**
**3. ಕೆಸ್ಟೆಪ್ಸ್/ಆಡಳಿತ/ವಿ.ಕೇಂದ್ರ-ತಾರಾಲಯ ಮಾ.ಸೂ/18/2025-26 ದಿನಾಂಕ:03.02.2025**
**4. ಸಂಖ್ಯೆ: ಕೆಸ್ಟೆಪ್ಸ್/ಆಡಳಿತ/ವಿ.ಕೇ.&ತಾ/ನೇ.ಮಾ/18/2025-26, ದಿನಾಂಕ: 06-02-2026**

ತುಮಕೂರು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರವು ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ಕಾರ್ಯನಿರ್ವಹಿಸುತ್ತದೆ. ಈ ವಿಜ್ಞಾನ ಕೇಂದ್ರವು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಆಗುಹೋಗುವ ದೈನಂದಿನ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ಮತ್ತು ಆಸಕ್ತ ನಾಗರೀಕರಿಗೆ ತಲುಪಿಸುವ ಹಾಗೂ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಕೊಡುಗೆ ನೀಡುವ ಉದ್ದೇಶದಿಂದ ತುಮಕೂರು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರವು ಸ್ಥಾಪನೆಗೊಂಡಿರುತ್ತದೆ.

ತುಮಕೂರು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಮೇಲೆ ಓದಲಾದ ಉಲ್ಲೇಖ (1) ರಿಂದ (4) ರಲ್ಲಿನ ಆದೇಶ ಮತ್ತು ಮಾರ್ಗಸೂಚಿಗಳನ್ವಯ ಕೆಳಕಂಡ ಹುದ್ದೆಗಳನ್ನು 11 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲು ಮಂಜೂರು ಮಾಡಲಾಗಿದೆ. ಸದರಿ ವಿಜ್ಞಾನ ಕೇಂದ್ರಕ್ಕೆ ಮಂಜೂರು ಮಾಡಿರುವ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್) ಉಲ್ಲೇಖ (4) ರಲ್ಲಿ ಸೂಚಿಸಿರುತ್ತದೆ. ಸದರಿ ವಿಜ್ಞಾನ ಕೇಂದ್ರಕ್ಕೆ ಕೆಳಕಂಡ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಹುದ್ದೆಗಳ ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ | ಮಾಸಿಕ ಸಂಚಿತ ವೇತನ |
|---|---|---|---|---|
| 1. | ಕುರೇಟರ್ Curator | 01 | 1st Class Bachelor degree in Engineering or Technology preferably in Mechanical/Computer Science/Information Science or 1st Class M.Sc. preferably in Physics/ Astrophysics/Chemistry and allied sciences/Environmental Science/Life Science/Science with one year experience in research/design/workshop/teaching or M.E / M.Tech / Ph.D (Science) in above disciplines. | 32,000 |
| 2. | ವೈಜ್ಞಾನಿಕ ಸಹಾಯಕರು Scientific Assistant | 01 | 1st Class Bachelor degree in Science with B.Ed. or one-year relevant experience after completion of the degree. | 27,000 |

| | | | | |
|---|---|---|---|---|
| 3. | ತಾಂತ್ರಿಕ ಸಹಾಯಕರು Technical Assistant | 01 | Three year Diploma course in electrical/ Electronics/Mechanical Engineering from a recognized Government Institution and one year relevant experience | 24,000 |
| 4. | ಟೆಕ್ನಿಶಿಯನ್ Technician | 01 | Matriculation with certificate from ITI or equivalent in Mechanical discipline with one year experience in relevant trade if the course duration is of two year and two years' experience, if the course duration is of one year. | 18,000 |
| 5. | ದ್ವಿತೀಯ ದರ್ಜೆ ಸಹಾಯಕರು Second Division Assistant | 01 | 2nd PUC from a recognized Board with computer skills and experience in handling correspondence of Accounts. | 20,000 |

**ಸೂಚನೆ: ಸಂಬಂಧಿತ ಕ್ಷೇತ್ರದಲ್ಲಿ ಉತ್ತಮ ಅರ್ಹತೆ ಮತ್ತು ಸೇವಾನುಭವ ಹೊಂದಿರುವ ಅಭ್ಯರ್ಥಿಗಳ ಸಂದರ್ಭದಲ್ಲಿ, ನೇಮಕಾತಿ ಪ್ರಾಧಿಕಾರದ ವಿವೇಚನೆಯ ಮೇರೆಗೆ, ಲಿಖಿತವಾಗಿ ದಾಖಲಿಸಬೇಕಾದ ಸಮಂಜಸವಾದ ಕಾರಣಗಳಿರುವಲ್ಲಿ ಅಥವಾ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಾಗ ಅರ್ಹತಾ ಮಾನದಂಡಗಳನ್ನು ಸಡಿಲಿಸುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರ ಹೊಂದಿರುತ್ತದೆ. ಆದ್ದರಿಂದ, ಅಭ್ಯರ್ಥಿಗಳು ತಮ್ಮ ಎಲ್ಲಾ ಅರ್ಹತೆಗಳು ಮತ್ತು ಸೇವಾನುಭವಗಳನ್ನು ಸಂಪೂರ್ಣವಾಗಿ ವಿವರಿಸುವುದು ಮುಖ್ಯ. ನಿಗದಿತ ಕನಿಷ್ಠ ಅರ್ಹತೆಗಳ ಜೊತೆಗೆ, ಹೆಚ್ಚುವರಿ ಅರ್ಹತೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವುದು ಅಗತ್ಯ.**

**2. ಪ್ರಮುಖ ಸೂಚನೆಗಳು:**

2.1. ಅಭ್ಯರ್ಥಿಗಳು ಕಡ್ಡಾಯವಾಗಿ ಜಿಮೇಲ್ ಖಾತೆಯನ್ನು (GMAIL ACCOUNT) ಹೊಂದಿರಬೇಕು ಹಾಗೂ ಅಭ್ಯರ್ಥಿಗಳು ಗೂಗಲ್ ಫಾರ್ಮ್ ಅನ್ನು ಭರ್ತಿ ಮಾಡಲು ಜಿಮೇಲ್ ಖಾತೆಯನ್ನು ಬಳಸಬೇಕು.

2.2. ಆನ್ ಲೈನ್ ಗೂಗಲ್ ಫಾರಂನಲ್ಲಿ ಅಭ್ಯರ್ಥಿಗಳು ಸಕ್ರಿಯವಾದ ಅಧಿಕೃತ ಇಮೇಲ್ ಐಡಿಯನ್ನು ನಮೂದಿಸುವುದು ಕಡ್ಡಾಯ. ದೋಷಪೂರಿತ ಇಮೇಲ್ ಐಡಿಯಿಂದ ಉಂಟಾಗುವ ಯಾವುದೇ ತೊಂದರೆಗೆ ನೇಮಕಾತಿ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

2.3. ಅಭ್ಯರ್ಥಿಗಳು ತಮ್ಮ ಫೋಟೋ ಮತ್ತು ಸಹಿಯನ್ನು jpg ಸ್ವರೂಪದಲ್ಲಿ ಮಾತ್ರ ಅಪ್ಲೋಡ್ ಮಾಡಬೇಕು ಮತ್ತು ಶೈಕ್ಷಣಿಕ / ಸೇವಾ ಅನುಭವ ಇತ್ಯಾದಿಗಳನ್ನು ಪೂರಕವಾದ ಇತರ ಎಲ್ಲಾ ದಾಖಲೆಗಳನ್ನು pdf ಸ್ವರೂಪದಲ್ಲಿ ಅಪ್ಲೋಡ್ ಮಾಡಬೇಕು. ಪ್ರತಿ FILE ಗಾತ್ರವು ಗರಿಷ್ಠ 1 MB ಮೀರಬಾರದು.

2.4. ಅಭ್ಯರ್ಥಿಗಳು ಆನ್ಲೈನ್ ಮುಖಾಂತರ ಗೂಗಲ್ ಫಾರಂ ನಲ್ಲಿ ಅರ್ಜಿ ಭರ್ತಿ ಮಾಡುವ ಮೊದಲು ಅರ್ಹತೆಗೆ ಸಂಬಂಧಿಸಿದ ಎಲ್ಲಾ ಸೂಚನೆಗಳನ್ನು ಓದಿಕೊಳ್ಳತಕ್ಕದ್ದು ಹಾಗೂ ನೀಡಿರುವ ಸೂಚನೆಗಳನ್ವಯ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು, ತಪ್ಪು ಅಥವಾ ಸುಳ್ಳು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಯಾವುದೇ ಸಮಯದಲ್ಲಿಯಾದರೂ ಅಭ್ಯರ್ಥಿತನವು ರದ್ದುಗೊಳ್ಳುವುದು.

2.5. ಅಭ್ಯರ್ಥಿಗಳು ಅರ್ಜಿಯಲ್ಲಿ ನೀಡಿದ ಮಾಹಿತಿಯ ಸತ್ಯತೆಗೆ ತಾವೇ ಜವಾಬ್ದಾರರಾಗಿರುತ್ತಾರೆ. ಅಗತ್ಯ ದಾಖಲೆಗಳನ್ನು ನೇಮಕಾತಿ ಪ್ರಾಧಿಕಾರವು ಕೇಳಿದಾಗ ಪ್ರಸ್ತುತ ಪಡಿಸಬೇಕು.

2.6. ಅಭ್ಯರ್ಥಿಗಳು ಎಚ್ಚರಿಕೆಯಿಂದ ಅಧಿಸೂಚನೆಯನ್ನು ಓದಿ ಅರ್ಥೈಸಿಕೊಂಡು ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ

2.7. ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಮಾತ್ರ ಅರ್ಹತೆಯನ್ನು ಹೊಂದಿರುತ್ತಾರೆ ಹಾಗೂ ಅರ್ಜಿ ಸಲ್ಲಿಸಿದ ಮಾತ್ರಕ್ಕೆ ಅಭ್ಯರ್ಥಿಗಳು ಸಂದರ್ಶನಕ್ಕೆ ಮತ್ತು ನೇಮಕಾತಿ ಅರ್ಹರಾಗುವುದಿಲ್ಲ.

2.8. ನೇಮಕಾತಿ ಪ್ರಾಧಿಕಾರದ ವೆಬ್ ಸೈಟ್ [https://tumkuruniversity.ac.in] ನಲ್ಲಿ ತೋರಿಸುವ ಗೂಗಲ್ ಫಾರಂ ಲಿಂಕ್ ಅನ್ನು ಆಯ್ಕೆ ಮಾಡಿ ಆನ್ ಲೈನ್ ಮುಖಾಂತರ ಅರ್ಜಿಯನ್ನು ಭರ್ತಿ ಮಾಡಬೇಕು. ಒಮ್ಮೆ ಸಲ್ಲಿಸಿದ ಅರ್ಜಿಯಲ್ಲಿನ ಯಾವುದೇ ಮಾಹಿತಿಯನ್ನು ಯಾವುದೇ ಹಂತದಲ್ಲಿ ಬದಲಾವಣೆ/ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಅಭ್ಯರ್ಥಿಗಳು ಎಚ್ಚರಿಕೆಯಿಂದ ಅಧಿಸೂಚನೆಯನ್ನು ಓದಿ ಅರ್ಥೈಸಿಕೊಂಡು ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

## 3. ಇತರ ವಿವರಗಳು:

3.1. ವೇತನ: ಮೇಲೆ ಕೋಷ್ಟಕದಲ್ಲಿ ವಿವರಿಸಿದ ಮಾಸಿಕ ಸಂಚಿತ ವೇತನವು ಕರ್ನಾಟಕ ಸರ್ಕಾರದ ನಿಯಮಗಳ ಪ್ರಕಾರ ನಿಗದಿಪಡಿಸಲಾದ ಮಾಸಿಕ ಸಂಚಿತ ವೇತನವಾಗಿರುತ್ತದೆ. ಮಾಹೆಯಾನ ವೇತನವನ್ನು ಕೆಸ್ಟೆಪ್ಸ್ ಸಂಸ್ಥೆಯ ವತಿಯಿಂದ HRMS ಮೂಲಕ ಪಾವತಿಸಲಾಗುವುದು.

3.2. ಈ ಹುದ್ದೆಗಳ ನೇಮಕಾತಿಯು ತಾತ್ಕಾಲಿಕವಾಗಿ 11 ತಿಂಗಳ ಅವಧಿಯ ಗುತ್ತಿಗೆ ನೇಮಕಾತಿಯಾಗಿದ್ದು, ಯಾವುದೇ ಖಾಯಂ ಹುದ್ದೆಯಾಗಿರುವುದಿಲ್ಲ. ಗುತ್ತಿಗೆ ಅವಧಿ ಮುಗಿದ ನಂತರ ಸಿಬ್ಬಂದಿಗಳ ಕಾರ್ಯಕ್ಷಮತೆಯ ಆಧಾರದ ಮೇಲೆ ಒಂದು ದಿನ ತಡೆಯ ನಂತರ (1 Day Break) ನಂತರ ಮುಂದಿನ 11 ತಿಂಗಳ ಅವಧಿಗೆ ನವೀಕರಣ ಮಾಡಲಾಗುವುದು, ಅಂತಹ ಸಿಬ್ಬಂದಿಗಳ ಮುಂದುವರಿಕೆ ಅಥವಾ ಬಿಡುಗಡೆ ವಿಷಯದಲ್ಲಿ ನೇಮಕಾತಿ ಪ್ರಾಧಿಕಾರದ ನಿರ್ಣಯವೇ ಅಂತಿಮವಾಗಿರುತ್ತದೆ. ಈ ಬಗ್ಗೆ ಸಿಬ್ಬಂದಿಗಳಿಗೆ ಹುದ್ದೆಯ ಮೇಲೆ ಯಾವುದೇ ಹಕ್ಕು ಇರುವುದಿಲ್ಲ.

3.3. ಸದರಿ ನೇಮಕಾತಿಗಳು ಸಂಪೂರ್ಣವಾಗಿ ಗುತ್ತಿಗೆ ಆಧಾರವಾಗಿದ್ದು, ಮಾಸಿಕ ಸಂಚಿತ ವೇತನಕ್ಕೆ ಮಾತ್ರ ಅರ್ಹರು, ಯಾವುದೇ ತುಟ್ಟಿ ಭತ್ಯೆ, ವೇತನ ಹೆಚ್ಚಳ, ಮನೆ ಬಾಡಿಗೆ ಭತ್ಯೆ, ಇಂಕ್ರಿಮೆಂಟ್, ಬಡ್ತಿ, ಪಿಂಚಣಿ ಇನ್ನ್ಯಾವುದೇ ಸೌಲಭ್ಯಗಳು ದೊರೆಯುವುದಿಲ್ಲ. ಸದರಿ ಕೇಂದ್ರಕ್ಕೆ ಪ್ರತಿ ಮಂಗಳವಾರ ಮಾತ್ರ ವಾರದ ರಜೆಯು ಇದ್ದು, ಕೇಂದ್ರದ ಕಾರ್ಯಕಾರಿಣಿ ಮಂಡಳಿಯಲ್ಲಿ ತೀರ್ಮಾನದಂತೆ ರಜೆ ಮತ್ತು ಇತರೆ ಸೌಲಭ್ಯಗಳು ದೊರಕುತ್ತವೆ.

3.4. ಸದರಿ ಹುದ್ದೆಗಳಿಗೆ ನೇಮಕಗೊಳ್ಳುವ ಸಿಬ್ಬಂದಿಗಳು ಮುಂದೆ ಪ್ರಾರಂಭವಾಗುವ ತಾರಾಲಯದ ಕೆಲಸಗಳನ್ನು ಕಡ್ಡಾಯವಾಗಿ ನಿರ್ವಹಿಸುವುದು.

3.5. ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ ಅಥವಾ ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆಯಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಅಥವಾ ತೃತೀಯ ಭಾಷೆಯಾಗಿ ಆರಿಸಿಕೊಂಡು ಉತ್ತೀರ್ಣರಾಗಿರಬೇಕು. ಕನ್ನಡವನ್ನು ಓದುವ, ಬರೆಯುವ ಮತ್ತು ಮಾತನಾಡುವ ಕೌಶಲ್ಯ ಕಡ್ಡಾಯ.

3.6. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಭ್ಯರ್ಥಿಯು ಕನಿಷ್ಠ 18 ವರ್ಷ ಪೂರ್ಣಗೊಂಡಿರಬೇಕು ಮತ್ತು ಗರಿಷ್ಠ ಕೆಳಕಂಡ ವಯೋಮಿತಿಯಲ್ಲಿರಬೇಕು.

| | |
|---|---|
| ಕ್ಯೂರೇಟರ್ | ಗರಿಷ್ಠ 42 |
| ವೈಜ್ಞಾನಿಕ ಸಹಾಯಕರು, ತಾಂತ್ರಿಕ ಸಹಾಯಕರು, ಟೆಕ್ನಿಶಿಯನ್, ದ್ವಿತೀಯ ದರ್ಜೆ ಸಹಾಯಕರು | ಗರಿಷ್ಠ 35 |

3.7. ಗೂಗಲ್ ಫಾರ್ಮ್ (GOOGLE FORM) ಮೂಲಕ ಅರ್ಜಿ ಸ್ವೀಕೃತಿ ಕಾಲಮಿತಿ:

| | |
|---|---|
| ಆನ್ ಲೈನ್ ಗೂಗಲ್ ಫಾರಂ ಮುಖಾಂತರ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ | 08.06.2026 |
| ಆನ್ ಲೈನ್ ಗೂಗಲ್ ಫಾರಂ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 15.06.2026 ಸಂಜೆ 5.00 ಗಂಟೆ |
| ಗೂಗಲ್ ಫಾರಂ ನಲ್ಲಿ ಸಲ್ಲಿಸಿದ ಅರ್ಜಿಯನ್ನು, **Annexure** ಮತ್ತು ಪೂರಕ ದಾಖಲೆಗಳ 5 ಸೆಟ್ ಗಳನ್ನು ಕಚೇರಿಗೆ ಸಲ್ಲಿಸಲು ಕೊನೆಯ ದಿನಾಂಕ | 16.06.2026 ಸಂಜೆ 5 ಗಂಟೆ |

**ವಿಶೇಷ ಸೂಚನೆ: ಗೂಗಲ್ ಫಾರಂ ನ ಅರ್ಜಿ, Annexure ಮತ್ತು ಇತರೆ ದಾಖಲೆಗಳನ್ನು 5 ಸೆಟ್ ಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಕೊನೆಯ ದಿನಾಂಕಕ್ಕೆ ಮುಂಚಿತವಾಗಿಯೇ ಮುದ್ದಾಂ, ಪೋಸ್ಟ್, ಕೊರಿಯರ್ ಮೂಲಕ ಸಲ್ಲಿಸುವುದು, ನಿಗದಿತ ದಿನಾಂಕ ಮೀರಿ ಸಲ್ಲಿಕೆಯಾಗುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ, ಅಂಚೆ, ಕೊರಿಯರ್ ವಿಳಂಬಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.**

## 4. ಅರ್ಜಿ ಸಲ್ಲಿಸುವ ವಿಧಾನ:

4.1 ಅರ್ಹ ಅಭ್ಯರ್ಥಿಗಳು ತುಮಕೂರು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿ ಅರ್ಜಿ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದು.

4.2 ಅರ್ಜಿಗಳನ್ನು ಆನ್‌ಲೈನ್ ಗೂಗಲ್ ಫಾರಂ ಮುಖಾಂತರ ಮಾತ್ರ ಸ್ವೀಕರಿಸಲಾಗುವುದು. ಅಭ್ಯರ್ಥಿಗಳು ತುಮಕೂರು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್ ಸೈಟ್ www.tumkuruniversity.ac.in ನಲ್ಲಿ ನೀಡಿರುವ ಗೂಗಲ್ ಫಾರಂ ಅನ್ನು ಭರ್ತಿ ಮಾಡಬೇಕು.

4.3 ಅಭ್ಯರ್ಥಿಗಳು ತಮ್ಮ ಇತ್ತೀಚಿನ ಪಾಸ್‌ಪೋರ್ಟ್ ಗಾತ್ರದ ಫೋಟೋ, ಸಹಿ ಮತ್ತು ಅಗತ್ಯ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಅಪ್ಲೋಡ್ ಮಾಡಬೇಕು.

4.4 ಅರ್ಜಿದಾರರು ತಮ್ಮ ಸರಿಯಾದ ಇಮೇಲ್ ಐಡಿಯನ್ನು ಹಾಗೂ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಅರ್ಜಿಯಲ್ಲಿ ನೀಡಬೇಕು.

**4.5 ಆನ್ಲೈನ್ ಗೂಗಲ್ ಫಾರಂ ನಲ್ಲಿ ಅಲ್ಲದೆ ಬೇರಾವುದೇ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**

**ಗೂಗಲ್ ಫಾರ್ಮ್ ಅನ್ನು ಭರ್ತಿ ಮಾಡುವಾಗ ತಾಂತ್ರಿಕ ಸಮಸ್ಯೆಗಳನ್ನು ಎದುರಿಸಿದರೆ, 0816-2254546 (ಕಛೇರಿ ಸಮಯದಲ್ಲಿ ಬೆಳಿಗ್ಗೆ 10 ರಿಂದ ಸಾಯಂಕಾಲ 05.00) ಗೆ ಕರೆ ಮಾಡಿ ಸಹಾಯ ಪಡೆಯಬಹುದು.**

## 5. ಆಯ್ಕೆ ಪ್ರಕ್ರಿಯೆ.

5.1 ನಿಗದಿಪಡಿಸಿದ ಅರ್ಹತೆ ಮತ್ತು ಸೇವಾ ಅನುಭವ ಮತ್ತು ಮಾನದಂಡವು ಕನಿಷ್ಠ ಅವಶ್ಯಕತೆಯಾಗಿದೆ. ಅರ್ಜಿ ಸಲ್ಲಿಸಿದ ಮಾತ್ರಕ್ಕೆ ಅಭ್ಯರ್ಥಿಗಳು ಸಂದರ್ಶನಕ್ಕೆ ಮತ್ತು ನೇಮಕಾತಿ ಅರ್ಹರಾಗುವುದಿಲ್ಲ.

5.2 ಗೂಗಲ್ ಫಾರಂ ಮೂಲಕ ಸ್ವೀಕೃತ ಅರ್ಜಿಗಳನ್ನು ಪರಿಶೀಲಿಸಿ, ಸಂದರ್ಶನಕ್ಕೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

5.3 ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸಂದರ್ಶನದ ವಿವರಗಳನ್ನು ನೇಮಕಾತಿ ಪ್ರಾಧಿಕಾರದ ಅಂತರ್ಜಾಲದಲ್ಲಿ ಮಾತ್ರ ತಿಳಿಸಲಾಗುತ್ತದೆ. ಸಂದರ್ಶನ ಮತ್ತು ನೇಮಕಾತಿ ಕುರಿತಂತೆ ಯಾವುದೇ ಅಭ್ಯರ್ಥಿಗೆ ಪತ್ರ ವ್ಯವಹಾರ ಮಾಡುವುದಿಲ್ಲ ಮತ್ತು ಇಮೇಲ್, ದೂರವಾಣಿ ಮೂಲಕ ತಿಳಿಸಲಾಗುವುದಿಲ್ಲ ಈ ಬಗ್ಗೆ ಅಂತರ್ಜಾಲವನ್ನು ನಿರಂತರವಾಗಿ ಪರಿಶೀಲಿಸುವುದು.

5.4 ಅಭ್ಯರ್ಥಿಗಳ ಶೈಕ್ಷಣಿಕ ಅರ್ಹತೆ, ಸೇವಾ ಅನುಭವ ಮತ್ತು ಸಂದರ್ಶನದ ಆಧಾರದ ಮೇಲೆ ಹುದ್ದೆಗೆ ಆಯ್ಕೆ ಮಾಡಲಾಗುವುದು.

## 6. ಅರ್ಹತಾ ಷರತ್ತುಗಳು:

6.1 ಭಾರತೀಯ ನಾಗರೀಕನಾಗಿರತಕ್ಕದ್ದು,

6.2 ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

6.3 ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ನೇಮಕಾತಿ ಪ್ರಾಧಿಕಾರ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ನೇಮಕಾತಿ ಪ್ರಾಧಿಕಾರಯು ಕಾಯ್ದಿರಿಸಿಕೊಂಡಿದೆ ಮತ್ತು ನೇಮಕಾತಿ ಪ್ರಾಧಿಕಾರ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.

6.4 ಕೇಂದ್ರ ಅಥವಾ ಕರ್ನಾಟಕ ಅಥವಾ ಇತರೆ ರಾಜ್ಯದ ಲೋಕ ಸೇವಾ ಆಯೋಗ ಅಥವಾ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಯಾವುದೇ ವಿಶ್ವವಿದ್ಯಾನಿಲಯಗಳಿಂದ ನಡೆಸಲಾಗುವ ಪರೀಕ್ಷೆಗಳಿಂದ ಅಥವಾ ನೇಮಕಾತಿಗಳಿಂದ ಖಾಯಂ ಆಗಿ ಡಿಬಾರ್ ಆದ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.

6.5 ಯಾವುದೇ ನೈತಿಕ ಪರಿಭಾಷೆಗೆ ಶಿಕ್ಷೆಗೆ ಒಳಪಟ್ಟ ವ್ಯಕ್ತಿ ಅಥವಾ ಕೇಂದ್ರ ಅಥವಾ ಕರ್ನಾಟಕ ಅಥವಾ ಇತರ ರಾಜ್ಯದ ಲೋಕಸೇವಾ ಆಯೋಗ, ಪರೀಕ್ಷಾ ಪ್ರಾಧಿಕಾರ ಅಥವಾ ಯಾವುದೇ ವಿಶ್ವವಿದ್ಯಾನಿಲಯಗಳಿಂದ ನಡೆಸಲಾಗುವ

ಪರೀಕ್ಷೆಗಳಿಂದ, ಅಥವಾ ನೇಮಕಾತಿಗಳಿಂದ ತಾತ್ಕಾಲಿಕವಾಗಿ ಡಿಬಾರ್ ಆದ ಅಥವಾ ಅನರ್ಹಗೊಂಡ ವ್ಯಕ್ತಿಯು, ಎಲ್ಲಾ ಸಂದರ್ಭಗಳನ್ನು ಮರು ಪರಿಶೀಲಿಸಿ ಅವರು ನೇಮಕಾತಿಗೆ ಅರ್ಹರೆಂದು ನೇಮಕಾತಿ ಪ್ರಾಧಿಕಾರಯು ಪರಿಗಣಿಸುವವರೆಗೂ ನೇಮಕಾತಿಗೆ ಅರ್ಹರಾಗುವುದಿಲ್ಲ.

6.6 ನೇಮಕಾತಿ ಪ್ರಾಧಿಕಾರವು ಈ ಕೆಳಕಂಡ ಹಕ್ಕುಗಳನ್ನು ಕಾಯ್ದಿರಿಸಿದೆ:

A) ಆಯ್ಕೆಗಾಗಿ ಲಿಖಿತ ಪರೀಕ್ಷೆ ಮತ್ತು / ಅಥವಾ ಕೌಶಲ್ಯ ಪರೀಕ್ಷೆ ಮತ್ತು / ಅಥವಾ ವೈಯಕ್ತಿಕ ಸಂದರ್ಶನವನ್ನು ನಡೆಸಬಹುದು.

B) ನೇಮಕಾತಿ ಪ್ರಾಧಿಕಾರಯು ಯಾವುದೇ ಹಂತದಲ್ಲಿ ಯಾವುದೇ ಕಾರಣಗಳನ್ನು ನೀಡದೆ ಈ ನೇಮಕಾತಿ ಪ್ರಕ್ರಿಯೆಯನ್ನು ಬದಲಾಯಿಸುವ ಅಥವಾ ರದ್ದುಗೊಳಿಸುವ ಹಕ್ಕನ್ನು ಹೊಂದಿದೆ.

C) ಖಾಲಿ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವುದು ಅಥವಾ ಕಡಿಮೆ ಮಾಡುವ ಹಕ್ಕು ನೇಮಕಾತಿ ಪ್ರಾಧಿಕಾರದ್ದಾಗಿದೆ.

6.7 ಕಳೆದ 05 ವರ್ಷಗಳಲ್ಲಿ ಯಾವುದೇ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ದುರ್ನಡತೆಯ/ಹಣಕಾಸಿನ ದುರುಪಯೋಗಕ್ಕೆ ಸಂಬಂಧಿಸಿದ ಕಾರಣಗಳಿಂದ ಸೇವೆಯಿಂದ ವಜಾಗೊಂಡ ನೌಕರರು ಮೇಲ್ಕಂಡ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

## 7. ವಿಶೇಷ ಸೂಚನೆಗಳು:

7.1 ಅಭ್ಯರ್ಥಿಗಳು ಗೂಗಲ್ ಫಾರಂ ನಲ್ಲಿ ಎಲ್ಲಾ ಕಡ್ಡಾಯ ಕಲಂ ಗಳನ್ನು ಸಂಪೂರ್ಣವಾಗಿ ಭರ್ತಿ ಮಾಡಬೇಕು ಮತ್ತು ಅಗತ್ಯ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಅಪ್‌ಲೋಡ್ ಮಾಡಬೇಕು.

7.2 ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ನಿರ್ದಿಷ್ಟಪಡಿಸಿದ ವಯಸ್ಸಿನ ಮಿತಿ, ಶೈಕ್ಷಣಿಕ ಮಾನದಂಡಗಳನ್ನು ಪೂರೈಸಿರಬೇಕು.

7.3 ಸೇವಾ ಅನುಭವ ಪ್ರಮಾಣಪತ್ರವು ಸಂಬಂಧಿತ ಸಂಸ್ಥೆಯ ಅಧಿಕೃತ ಲೆಟರ್‌ಹೆಡ್‌ನಲ್ಲಿರಬೇಕು ಮತ್ತು ಅಭ್ಯರ್ಥಿಯ ಹೆಸರು, ನೇಮಕಾತಿ ದಿನಾಂಕ, ನಿರ್ಗಮನ ದಿನಾಂಕ, ಹುದ್ದೆ, ಜವಾಬ್ದಾರಿಗಳು ಮತ್ತು ಪಡೆದ ವೇತನದಂತಹ ನಿಖರವಾದ ಮಾಹಿತಿಯನ್ನು ಒಳಗೊಂಡಿರಬೇಕು.

7.4 ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ಬದಲಾವಣೆಗಳು ಅಥವಾ ಸ್ಪಷ್ಟೀಕರಣಗಳನ್ನು ನೇಮಕಾತಿ ಪ್ರಾಧಿಕಾರ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಅಭ್ಯರ್ಥಿಗಳು ನಿಯಮಿತವಾಗಿ ವೆಬ್‌ಸೈಟ್ ಅನ್ನು ಪರಿಶೀಲಿಸಿ ಇತ್ತೀಚಿನ ಮಾಹಿತಿಯನ್ನು ಪಡೆಯುವಂತೆ ಸೂಚಿಸಲಾಗಿದೆ.

7.5 ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮೊದಲು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಶೈಕ್ಷಣಿಕ ಅರ್ಹತೆ ಮತ್ತು ಅನುಭವದ ಮಾನದಂಡಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು. ಎಲ್ಲಾ ಶೈಕ್ಷಣಿಕ ಅರ್ಹತೆಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ ನೇಮಕಾತಿ ಪ್ರಾಧಿಕಾರಯಿಂದ ಪಡೆದಿರಬೇಕು.

7.6 ಸೂಚಿಸಲಾದ ಕನಿಷ್ಠ ಅರ್ಹತೆಗಳು ಮತ್ತು ಅನುಭವವು ಅರ್ಜಿಯನ್ನು ಪರಿಗಣಿಸಲು ಆಧಾರವಾಗಿದ್ದರೂ, ಇವು ಮಾತ್ರ ಸಂದರ್ಶನಕ್ಕೆ ಆಹ್ವಾನವನ್ನು ಖಚಿತಪಡಿಸುವುದಿಲ್ಲ. ವಿಶೇಷವಾಗಿ ಅರ್ಜಿಗಳ ಸಂಖ್ಯೆ ಹೆಚ್ಚಿದಾಗ, ನೇಮಕಾತಿ ಪ್ರಾಧಿಕಾರವು ಎಲ್ಲಾ ಅರ್ಜಿದಾರರನ್ನು ಸಂದರ್ಶಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ, ನೇಮಕಾತಿ ಪ್ರಾಧಿಕಾರವು ಸಂದರ್ಶನಕ್ಕೆ ಕರೆಯುವ ಅರ್ಜಿದಾರರ ಸಂಖ್ಯೆಯನ್ನು ಸಮಂಜಸವಾದ ಮಿತಿಗೆ ನಿರ್ಬಂಧಿಸಬಹುದು. ಈ ನಿರ್ಧಾರವು ಅಭ್ಯರ್ಥಿಯ ಶೈಕ್ಷಣಿಕ ಹಿನ್ನೆಲೆ, ಸೇವಾ ಅನುಭವ ಮತ್ತು ಜಾಹೀರಾತಿನಲ್ಲಿ ಉಲ್ಲೇಖಿಸಿದ ಹೆಚ್ಚುವರಿ ಅರ್ಹತೆಗಳ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತದೆ. ಆದ್ದರಿಂದ, ಅಭ್ಯರ್ಥಿಗಳು ತಮ್ಮ ಎಲ್ಲಾ ಅರ್ಹತೆಗಳು ಮತ್ತು ಅನುಭವಗಳನ್ನು ಸಂಪೂರ್ಣವಾಗಿ ವಿವರಿಸುವುದು ಮುಖ್ಯ. ನಿಗದಿತ ಕನಿಷ್ಠ ಅರ್ಹತೆಗಳ ಜೊತೆಗೆ, ಹೆಚ್ಚುವರಿ ಅರ್ಹತೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವುದು ಅಗತ್ಯ.

7.7 ನೇಮಕಗೊಂಡ ಸಿಬ್ಬಂದಿಗಳು ಕರ್ನಾಟಕ ರಾಜ್ಯದ ಯಾವುದೇ ಸ್ಥಳಕ್ಕೆ ವರ್ಗಾವಣೆಗೊಳ್ಳಲು ಜವಾಬ್ದಾರರಾಗಿರುತ್ತಾರೆ. ಈ ಬಗ್ಗೆ ಸಂಬಂಧಿತ ಪ್ರಾಧಿಕಾರದ **ನಿರ್ಣಯವೇ ಅಂತಿಮವಾಗಿರುತ್ತದೆ**

7.8 ಕೇವಲ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಸಂದರ್ಶನಕ್ಕೆ ಹಾಜರಾಗುವುದು ಮತ್ತು ಸಂದರ್ಶನಕ್ಕೆ ಅರ್ಹತೆ ಪಡೆದ ಮಾತ್ರಕ್ಕೆ ಅಭ್ಯರ್ಥಿಗಳಿಗೆ ಮೇಲಿನ ಹುದ್ದೆಗೆ ನೇಮಕಾತಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ. ನೇಮಕಾತಿ ಪ್ರಾಧಿಕಾರವು ನಿಗದಿಪಡಿಸಬಹುದಾದ ಅರ್ಹತಾ ಮಾನದಂಡಗಳಿಗೆ ಒಳಪಟ್ಟಿರುತ್ತದೆ.

A) ನೇಮಕಾತಿ ಪ್ರಾಧಿಕಾರವು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನೆಡೆಸುವುದಿಲ್ಲ ಮತ್ತು ಸಂದರ್ಶನಕ್ಕೆ ಕರೆಯದ ಕಾರಣಗಳ ಬಗ್ಗೆ ಪ್ರಶ್ನಿಸಲು ಅಭ್ಯರ್ಥಿಗಳಿಗೆ ಅವಕಾಶವಿರುವುದಿಲ್ಲ

B) ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಲು ಯಾವುದೇ ಪ್ರಯಾಣ ಭತ್ಯೆ/ ದಿನ ಭತ್ಯೆ ನೀಡಲಾಗುವುದಿಲ್ಲ.

7.9 ಸಂದರ್ಶನಕ್ಕೆ ಅರ್ಹತೆ ಪಡೆದ ಅಭ್ಯರ್ಥಿಗಳು ತಮ್ಮ ಅರ್ಜಿಯಲ್ಲಿ ಸಲ್ಲಿಸಿದ ಎಲ್ಲಾ ಮೂಲ ದಾಖಲೆಗಳನ್ನು ಸಂದರ್ಶನದ ಸಮಯದಲ್ಲಿ ಹಾಜರುಪಡಿಸಬೇಕಾಗುತ್ತದೆ.

7.10 ಯಾವುದೇ ರೀತಿಯ ಪ್ರಚಾರ ಅಥವಾ ಪ್ರಭಾವ ಬೀರುವುದು ಹುದ್ದೆಗೆ ಅರ್ಹತೆಯನ್ನು ರದ್ದುಗೊಳಿಸುತ್ತದೆ.

7.11 ನೇಮಕಾತಿಗೆ ಸಂಬಂಧಿಸಿದ ಯಾವುದೇ ವಿವಾದ ಉಂಟಾದಲ್ಲಿ, ನೇಮಕಾತಿ ಪ್ರಾಧಿಕಾರದ ನಿರ್ಧಾರ ಅಂತಿಮವಾಗಿರುತ್ತದೆ.

7.12 ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳು ಅವರ ಸಂದರ್ಶನದ ಕರೆ ಪತ್ರ / ಇಮೇಲ್ ನ ಪ್ರತಿ ಹಾಗೂ ಅವರ ಭಾವಚಿತ್ರವಿರುವ ಮೂಲ ಗುರುತಿನ ಚೀಟಿ (ಚುನಾವಣಾ ಐಡಿ/ಆಧಾರ್ ಕಾರ್ಡ್/ಡ್ರೈವಿಂಗ್ ಲೈಸನ್ಸ್/ ಪಾನ್ ಕಾರ್ಡ್/ಪಾಸ್ ಪೋರ್ಟ್ /ಸರ್ಕಾರೀ ನೌಕರರ ಐಡಿ) ಯನ್ನು ಸಂದರ್ಶನದ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು, ತಪ್ಪಿದ್ದಲ್ಲಿ ಸಂದರ್ಶನಕ್ಕೆ ಪ್ರವೇಶವನ್ನು ನೀಡಲಾಗುವುದಿಲ್ಲ ಹಾಗೂ ಡೌನ್ಲೋಡ್ ಮಾಡಿರುವ ಗುರುತಿನ ಚೀಟಿಗಳು/ಇತರೆ ಯಾವುದೇ ಗುರುತಿನ ಚೀಟಿಗಳು/ಕಲರ್ ಜೆರಾಕ್ಸ್ ಪ್ರತಿಗಳನ್ನು ಪರಿಗಣಿಸಲಾಗುವುದಿಲ್ಲ.

7.13 ಫೋಟೋ ಮತ್ತು ಸಹಿಯನ್ನು/ದಾಖಲೆಗಳನ್ನು ಅಪ್ಲೋಡ್ ಮಾಡದೆ ಇರುವ ಹಾಗೂ ಅಪೂರ್ಣವಾಗಿರುವ ದಾಖಲೆಗಳನ್ನು ಅಪ್ಲೋಡ್ ಮಾಡಿರುವ ಹಾಗೂ ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

7.14 ಈ ಅಧಿಸೂಚನೆಯು ಜಾರಿಯಾದ ಮೇಲೆ ಈ ಅಧಿಸೂಚನೆಯಲ್ಲಿ ನಮೂದಿಸಿರುವ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರಯು ಯಾವುದೇ ನಿಯಮಗಳು ಮತ್ತು ನಿರ್ದೇಶನಗಳನ್ನು ಜಾರಿ ಮಾಡಿದ್ದಲ್ಲಿ/ತಿದ್ದುಪಡಿ ಮಾಡಿದ್ದಲ್ಲಿ/ಪರಿಷ್ಕರಿಸಿದಲ್ಲಿ ಅವುಗಳನ್ನು ನೇಮಕಾತಿ ಪ್ರಕ್ರಿಯೆಯ ಸಮುಚಿತ ಹಂತದಲ್ಲಿ ಸೇರಿಸಿಕೊಳ್ಳಲಾಗುವುದು.

## 8. ದುರ್ನಡತೆ:

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ /ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಾಕಾತಿ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅವನು/ಅವಳು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ಹುದ್ದೆಯ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

**ಸಹಿ/-**
**ಸದಸ್ಯ ಕಾರ್ಯದರ್ಶಿಗಳು**